# ಫುಸ್ಕೋಸ್ ಶಾಲೆ

ಇಂದಿರನಗರ ಬೆಂಗಳೂರು

ವಾರ್ಷಿಕ ಪರೀಕ್ಷೆ– ೨೦೧೭

ವಿಷಯ : ಕನ್ನಡ ದ್ವಿತೀಯ ಭಾಷೆ

ಅಂಕಗಳು–80

ತರಗತಿ : VIII ಅವಧಿ : 3hours

## ವಿಭಾಗ – ಎ

**I. ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ)** **15**

1. ಕಂಪ್ಯೂಟರ್‌ನ ಉಪಯೋಗ ಮತ್ತು ದುರುಪಯೋಗ
2. ಒಗ್ಗಟ್ಟಿನಲ್ಲಿ ಬಲವಿದೆ – ಈ ಗಾದೆಯನ್ನು ವಿಸ್ತರಿಸಿ, ಪ್ರಬಂಧ ಬರೆಯಿರಿ.

**II. ಪತ್ರಲೇಖನ (ಬೇಕಾದ ಒಂದಕ್ಕೆ ಮಾತ್ರ)** 7

1. 'ನಲ್ಲಿ' ಹಾಳಾಗಿದ್ದು ಅದನ್ನು ರಪೇರಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗೆ ಒಂದು ಪತ್ರವನ್ನು ಬರೆಯಿರಿ.
2. ನೀವು ನೋಡಿದ ಕ್ರಿಕೆಟ್ ಆಟದ ಕುರಿತು ಬಣ್ಣಿಸುತ್ತ ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

**III. ಪ್ಯಾಸೇಜ್**

ಇಂದು ಗಾಂಧೀಜಿ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತ ಹಿಂದಿನ ದಿನ ಮನುಗಾಂಧಿ ಮತ್ತು ಆಭಾಗಾಂಧಿ ಪ್ರಾರ್ಥನೆಯ ತರುವಾಯ ಶ್ರೋತೃಗಳ ಕ್ಷಮೆ ಕೇಳಿದ ಪ್ರಸಂಗವನ್ನು ಪ್ರಸ್ತಾಪಿಸಿದರು. ರವಿವಾರ ಸಂಜೆಯ ಪ್ರಾರ್ಥನೆಯ ಸಭೆಯಲ್ಲಿ ಮನುಗಾಂಧಿ ಮತ್ತು ಆಭಾಗಾಂಧಿ ಭಜನೆಗಳನ್ನು ಹಾಡುತ್ತಿದ್ದಾಗ ಮಧ್ಯದಲ್ಲಿ ರಾಗ ಲಯ ತಪ್ಪಿದರು. ಜೋರಾಗಿ ನಕ್ಕು ಪ್ರಾರ್ಥನೆ ಸಭೆಯ ಪ್ರಶಾಂತ ವಾತಾವರಣವನ್ನು ಕಲುಷಿತಗೊಳಿಸಿದರು. ಈ ಹುಡುಗಿಯರ ನಡವಳಿಕೆ ಗಾಂಧೀಜಿಯ ಮನಸ್ಸಿಗೆ ತುಂಬ ನೋವುಂಟುಮಾಡಿತ್ತು. ಪ್ರಾರ್ಥನೆಯ ಮಹತ್ವ ಅವರಿಗೆ ಅರಿವಾಗಿಲ್ಲ ಎಂದು ಗಾಂಧೀಜಿಗೆ ಅನಿಸಿತು. ಅನಂತರ ತಮ್ಮ ಅನುಚಿತ ವರ್ತನೆಗೆ ಮನುಗಾಂಧಿ ಮತ್ತು ಆಭಾಗಾಂಧಿ ಗಾಂಧೀಜಿಯ ಕ್ಷಮೆ ಕೇಳಿದರು.

ಆ ಹುಡುಗಿಯರ ಬಗ್ಗೆ ಗಾಂಧೀಜಿಗೆ ಎಳ್ಳಷ್ಟಾದರೂ ಸಿಟ್ಟಿರಲಿಲ್ಲ. ಗಾಂಧೀಜಿ ತಮ್ಮ ಬಗ್ಗೆಯೇ ಸಿಟ್ಟುಗೊಂಡರು. ಆ ಹುಡುಗಿಯರು ಗಾಂಧೀಜಿಯ ಮಾರ್ಗದರ್ಶನದಲ್ಲಿಯೇ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡಿದ್ದರು. ಪ್ರಾರ್ಥನೆಯ ಸಂದರ್ಭದಲ್ಲಿ ಸಂಪೂರ್ಣವಾಗಿ ಭಗವಂತನಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಏಕಾಗ್ರತೆ ಬೆಳೆಸಿಕೊಳ್ಳಬೇಕೆಂದು ತಾವು ಈ ಹುಡುಗಿಯರಿಗೆ ಯೋಗ್ಯ ಮಾರ್ಗದರ್ಶನ ನೀಡಿಲ್ಲವೇನೋ ಎಂದು ಗಾಂದೀಜಿಗೆ ಅನಿಸಿತು. ಆದರೆ ಮನುಗಾಂಧಿ ಮತ್ತು ಆಭಾಗಾಂಧಿಗೆ ಪಶ್ಚಾತ್ತಾಪವಾಗಿರುವುದು ತಿಳಿದು ಗಾಂಧೀಜಿಯ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು. ಅವರು ಸಾರ್ವಜನಿಕವಾಗಿ ಪ್ರಾರ್ಥನಾ ಸಭೆಯಲ್ಲಿ ಎಲ್ಲರ ಕ್ಷಮೆ ಕೇಳಬೇಕೆಂದು ಗಾಂಧಿಜಿ ಸೂಚಿಸಿದರು. ತಪ್ಪು ಮಾಡಿದ ವ್ಯಕ್ತಿ ಸಾರ್ವಜನಿಕವಾಗಿ ತಪ್ಪೊಪ್ಪಿಗೆಗೆ ಸಿದ್ದನಾದರೆ, ಆ ವ್ಯಕ್ತಿಯ ಆತ್ಮ ಪರಿಶುದ್ಧವಾಗುತ್ತದೆ. ತಪ್ಪಿತಸ್ಥನನ್ನು ಮುಂದೆಂದೂ ಅಂತಹ ತಪ್ಪು ಮಾಡದಂತೆ ರಕ್ಷಿಸುತ್ತದೆ ಎಂದು ಗಾಂಧೀಜಿ ನಂಬಿದ್ದರು.

ಪ್ರಾರ್ಥನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧೀಜಿ ಆ ದಿನದ ಘಟನಾವಳಿಗಳ ಬಗ್ಗೆ ಪ್ರಸ್ತಾಪಿಸಿದರು. ಈ ದಿನ ಗಾಂಧೀಜಿಯನ್ನು ರಾವಲ್‌ಪಿಂಡಿ ಹಾಗೂ ದೇರಾಪೌಜಿಖಾನ್‌ನ ಹಿಂದೂ ಮತ್ತು ಶಿಖ್ಖರ ನಿಯೋಗವೊಂದು ಭೇಟಿಯಾಗಿತ್ತು. ಒಂದು ಕಾಲದಲ್ಲಿ ಹಿಂದೂಗಳು ಮತ್ತು ಶಿಖ್ಖರು ರಾವಲ್‌ಪಿಂಡಿಯಲ್ಲಿ

ನೆಮ್ಮದಿಯಿಂದ ಬಾಳುತ್ತಿದ್ದರು. ಇಂದು ಅವರೆಲ್ಲ ನಿರಾಶ್ರಿತರಾಗಿ ದಿಲ್ಲಿಗೆ ಹಿಂತಿರುಗಿದ್ದಾರೆ. ಆಧುನಿಕ ಲಾಹೋರ್‌ನ ಸಮೃದ್ಧಿಗೆ ಹಿಂದೂಗಳೂ ಶಿಖ್ಖರೂ ಕಾರಣರಲ್ಲವೆ ? ಆದರೆ ಇಂದು ಅವರೆಲ್ಲ ತಮ್ಮ ತಾಯ್ನಾಡಿನಿಂದ ಹೊರದಬ್ಬಲ್ಪಟ್ಟಿದ್ದಾರೆ. ಇದನ್ನೆಲ್ಲ ಯೋಚಿಸಿ ಗಾಂಧೀಜಿ ಬಹಳ ನೊಂದುಕೊಂಡರು. ಅಲ್ಲಿ ಉಳಿದಿರುವ ಹಿಂದೂಗಳಿಗೆ ಸಿಖ್ಖರಿಗೆ ಫಾಕಿಸ್ತಾನದ ಆಡಳಿತ ಸಂಪೂರ್ಣ ರಕ್ಷಣೆಯ ಭರವಸೆ ನೀಡಬೇಕು ಎಂದರು ಗಾಂಧೀಜಿ. ರಾವಲ್ಪಿಂಡಿಯಲ್ಲಿ ಇನ್ನೂ 18,000 ಹಿಂದೂಗಳು, ಶಿಖ್ಖರು ವಾಘ ಶಿಬಿರದಲ್ಲಿ 30,000 ಹಿಂದೂಗಳು ಶಿಖ್ಖರು ಉಳಿದಿದ್ದಾರೆ ಎಂದು ಯಾರೋ ಗಾಂಧೀಜಿಯನ್ನು ಒತ್ತಾಯಿಸಿದರು. ಯಾವುದೇ ಸಂರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಳ್ಳದೆ ದೇವರ ನಾಮ ಸ್ಮರಣೆಯ ಅಸ್ತ್ರವಾಗಿ ಮಾಡಿಕೊಂಡು
ಗಾಂಧೀಜಿ ಪಾಕಿಸ್ತಾನಕ್ಕೆ ಹೋಗಲು ಬಯಸಿದ್ದರು. ಅಲ್ಲಿ ಯರಾದರೂ ತಮ್ಮ ಪ್ರಾಣ ತೆಗೆಯಲು ಬಯಸಿದರೆ ಅವರ ಕೈಯಲ್ಲಿ
ಸಂತಸದಿಂದ ಪ್ರಾಣ ತ್ಯಾಗ ಮಾಡಲು ಬಯಸಿದ್ದರು.

**ಪ್ರಶ್ನೆಗಳು;** **10**

1. ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಯ ಮನಸ್ಸಿಗೆ ನೋವುಂಟುಮಡುವಂತೆ ನಡೆದ ಘಟನೆ ಯಾವುದು ?
2. ಗಾಂಧೀಜಿ ತಮ್ಮ ಬಗ್ಗೆಯೇ ಕೋಪಗೊಂಡಿದ್ದೇಕೆ ?
3. ಸಾರ್ವಜನಿಕವಾಗಿ ಕ್ಷಮೆ ಕೇಳುವ ವಿಚಾರದಲ್ಲಿ ಗಾಂಧೀಜಿಯವರಿಗೆ ಇದ್ದ ನಂಬಿಕೆ ಎಂಥದ್ದು ?
4. ಗಾಂಧೀಜಿಯವರು ನೊಂದುಕೊಳ್ಳಲು ಕಾರಣವೇನು ?
5. ಗಾಂಧೀಜಿಯ ಆಶಯ ಏನು ? ಅವರ ಬಯಕೆ ಎಂಥದ್ದು ?

**IV. ವ್ಯಾಕರಣ** **8**

1. ರಮಣೀಯ , ಅಮೂಲ್ಯ (ಸಮನಾರ್ಥಕ ಪದ ಬರೆಯಿರಿ)
2. ಮಾವಿನ ಹಣ್ಣು ತಿನ್ನಲು ಹುಳಿಯಾಗಿತ್ತು. ಆದ್ದರಿಂದ ನಾನು ಅದನ್ನು ತಿನ್ನಲಿಲ್ಲ.
   (ವಿರುದ್ಧ ಅರ್ಥ ಬರುವಂತೆ ವಾಕ್ಯ ಬದಲಾಯಿಸಿರಿ.)
3. ಸ್ವಾದ , ವಿಶಾಲವಾದ (ಸ್ವಂತ ವ್ಯಾಕದಲ್ಲಿ ಬರೆಯಿರಿ)
4. ಅವನು ರಸ್ತೆಯ ಬಳಿ ಮಗು ಬರುವುದನ್ನೇ ನೋಡುತ್ತಾ ನಿಂತನು.
   (ಗೆರೆ ಎಳೆದಿರುವ ಪದಗಳನ್ನು ಬಹುವಚನಕ್ಕೆ ಬದಲಾಯಿಸಿರಿ)
5. ಅಂಬಿಗನು ದಾಟಿಸುತ್ತಿದ್ದನು ದೋಣಿಯ ಮೂಲಕ ನದಿಯಲ್ಲಿ ಜನರನ್ನು. (ವಾಕ್ಯವನ್ನು ಸರಿಪಡಿಸಿ)
6. ಶಾಲೆ ____ ಸಮಯ ____ ಸರಿಯಾಗಿ ಹೋಗಬೇಕು. (ಬಿಟ್ಟ ಸ್ಥಳಗಳಿಗೆ ಸೂಕ್ತ ಪ್ರತ್ಯಯ ತುಂಬಿರಿ)
7. ಮುದುಕಿ ನಿಧಾನವಾಗಿ ರಸ್ತೆಯನ್ನು ದಾಟುತ್ತಾಳೆ. (ಲಿಂಗ ಬದಲಾಯಿಸಿ ವಾಕ್ಯ ಮಾಡಿರಿ.)
8. ವಾಹನಗಳು ಬೆಟ್ಟ ಪ್ರದೇಶದಲ್ಲಿ ನಿಧಾನವಾಗಿ ಚಲಿಸಿದವು. (ಭವಿಷತ್ ಕಾಲಕ್ಕೆ ಬದಲಾಯಿಸಿರಿ)

**ವಿಭಾಗ – ಬಿ**

**(ಬೇಕಾದ ನಾಲ್ಕಕ್ಕೆ ಮಾತ್ರ)**

**ಸಾಹಿತ್ಯ ಸಂಗಮ (ಸಣ್ಣ ಕಥೆಗಳು)**

**V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ತುಚೀಪ್ ತುದಾಂಡ್ ತುಬದ್ – ರೆಡೀ)**

೧. ಕರೀಮನು ವೇಗವಾಗಿ ಎಲ್ಲಿಗೆ ಹೋಗುತ್ತಿದ್ದನು? ಅವನಿಗೆ ನಗು ಬರಲು ಕಾರಣವೇನು ? 2

೨. ಸಿರಿವಂತಿಕೆಯಲ್ಲಿ ಬೆಳೆದ ಜನಾರ್ದನ ಕರೀಮನಿಗೆ ಹೇಳಿದ್ದೇನು ? 3

೩. ಕಾರ್ಮಿಕರು ಬೀಡಿ ಕಾರ್ಖಾನೆಯಲ್ಲಿ ಹೇಗೆ ದುಡಿಯುತ್ತಿದ್ದರು ? ಅಲ್ಲಿ ಕರೀಮನ ಕೆಲಸವೇನಾಗಿತ್ತು ? 2

೪. ತಿಮ್ಮಾರೆಡ್ಡಿಗೆ ಅವಮಾನವಾಗಿ ಕೋಪ ಉಂಟಾಗಲು ಕಾರಣವೇನು ? 3

**VI. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಗರುಡಗಂಬದ ದಾಸಯ್ಯ)**

೧. ಲೇಖಕರು ಗರುಡಗಂಬವನ್ನು ಹಿಡಿದು ಸ್ನೇಹಿತರ ಕೊಠಡಿಗೆ ಏಕೆ ಹೋದರು ? 2

೨. ಲೇಖಕರಿಗೆ ಗರುಡಗಂಬವು ಹೇಗೆ ಸಿಕ್ಕಿತು ? 2

೩. ಲೇಖಕರಿಗೆ ಅವಮಾನ ಉಂಟಾಗಲು ಕಾರಣವೇನು ? 3

೪. ಲೇಖಕರು ಸ್ಟೇಷನ್‌ನಿಂದ ಓಡಿಹೋಗಲು ಕಾರಣವೇನು ? 3

## ನಾಟ್ಯಮಯೂರಿ

**VII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ – ೧)**

೧. ಶಿವ– ಶಿವೆಯರ ನೃತ್ಯದ ಸೊಬಗನ್ನು ಬಣ್ಣಿಸಿ. 2

೨. ಕ್ಷಮಿಸಿ ಎಂದು ನುಡಿದವರು ಯಾರು ? ಆತನು ನೋಡಲು ಹೇಗಿದ್ದಾನೆ ? 2

೩. ಮಾರಸಿಂಗಮಯ್ಯ ಯಾರು ? ರಾಜಕುಮಾರ ವಿಷ್ಣುವರ್ಧನನು ಅವರ ವ್ಯಕ್ತಿತ್ವವನ್ನು ಏಕೆ ಪ್ರಶಂಸಿಸಿದನು ? 3

೪. ವಿಷ್ಣುವರ್ಧನನ ಕುದುರೆಯ ಹೆಸರೇನಾಗಿತ್ತು ? ವಿಷ್ಣುವರ್ಧನನಿಗೆ ಬೆಂಗಾವಲಿನವರು ಹೇಗೆ ವೀರವಂದನೆಗಳನ್ನು ಸಲ್ಲಿಸಿದರು ? 3

**VIII ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ– ೩)**

೧. ಬಪ್ಪರಸ ಯಾರು ? ಆತ ವಿಷ್ಣುವರ್ಧನನಿಗೆ ಮಾರಸಿಂಗಮಯ್ಯನವರ ಬಗ್ಗೆ ನುಡಿದ ಮಾತುಗಳೇನು ? 2

೨. ಬಳ್ಳಿಗಾವಿಯ ಹಿರಿಮೆ ಕಾದಂಬರಿಯಲ್ಲಿ ಹೇಗೆ ವರ್ಣಿತವಾಗಿದೆ ? 2

೩. ಶಾಂತಲೆಯ ವ್ಯಕ್ತಿತ್ವವನ್ನು ಪರಿಚಯಿಸಿರಿ. 3

೪. ಯುದ್ಧದಲ್ಲಿ ಜಯ ಗಳಿಸಿ ರಾಜಧಾನಿ ದ್ವಾರಸಮುದ್ರಕ್ಕೆ ಮರಳಿದ ವಿಷ್ಣುವರ್ಧನನನ್ನು ಹೇಗೆ ಸ್ವಾಗತಿಸಲಾಯಿತು ? 3

IX. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ– ೪)

೧. ಡಣಾಯಕ ಮಾರಸಿಂಗಮಯ್ಯನವರಿಗೆ ರಾಜಮಾತೆ ಏಚಲಾದೇವಿಯವರು ಕಳುಹಿಸಿದ ಓಲೆಯಲ್ಲದ್ದ ಸಂಗತಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ. 2

೨. ಮಾರಸಿಂಗಮಯ್ಯನವರು ತಮ್ಮ ಪತ್ನಿಗೆ ತಿಳಿಸಿದ ಜೇನಿನಂತಹ ಸುದ್ದಿ ಯಾವುದು ? 2

೩. ರಾಜಧಾನಿಯಿಂದ ಶಾಂತಲೆಗೆ ಬಂದ ಉಡುಗೊರೆ ಏನು ? ವಿವರಿಸಿ. 3

೪. ಶಾಂತಲೆ ಕಳುಹಿಸಿದ ಚಿತ್ರ ವಿನ್ಯಾಸಕ್ಕೆ ದೊರೆತ ಪ್ರತಿಕ್ರಿಯೆಗಳೇನು ? 3

************************